# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/161/14-15

ದಿನಾಂಕ 08-07-2016

ಉಪಸ್ಥಿತರು: **ಶ್ರೀ ಲೋಕೇಶ್ ಪಿ.ಎನ್** (ಕ.ಆ.ಸೇ)

**ಸಹಾಯಕ ಆಯುಕ್ತರು, ಬಳ್ಳಾರಿ.**

| ವಾದಿಗಳು | ಪ್ರತಿವಾದಿಗಳು |
|---|---|
| 1. ಶ್ರೀ ಜಿ.ಪಂಪಾಪತಿ ತಂದೆ ಲೇಟ್ ಗಗ್ಗಿ ಹನುಮಂತಪ್ಪ<br>2. ಶ್ರೀ ಜಿ. ಈರಣ್ಣ ತಂದೆ ಲೇಟ್ ಗಗ್ಗಿ ಹನುಮಂತಪ್ಪ<br>3.ಶ್ರೀ ಜಿ.ಪಾಲಕ್ಷಪ್ಪ ತಂದೆ ಲೇಟ್ ಗಗ್ಗಿ ಹನುಮಂತಪ್ಪ<br>4. ಶ್ರೀ ಜಿ.ಪಾಂಡುರಂಗ ತಂದೆ ಲೇಟ್ ಗಗ್ಗಿ ಹನುಮಂತಪ್ಪ ,<br>ವಾದಿಗಳು 1 ರಿಂದ 4 ರವರುಗಳ ವಾಸ ಸೋಮಲಾಪುರ ಗ್ರಾಮ ,<br>ಬಳ್ಳಾರಿ ತಾಲೂಕು<br>**(ಶ್ರೀ ಡಿ.ಮಲ್ಲಯ್ಯ, ವಕೀಲರು, ಬಳ್ಳಾರಿ)** | 1.ವಿಶೇಷ ತಹಶೀಲ್ದಾರರು, ಕುರುಗೋಡು<br>2. ಕಂದಾಯ ನಿರೀಕ್ಷಕರು, ಕುರುಗೋಡು<br>3.ಉಪತಹಶೀಲ್ದಾರರು, ಕುರುಗೋಡು<br>4.ತಹಶೀಲ್ದಾರರು, ಬಳ್ಳಾರಿ. |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಬಳ್ಳಾರಿ | ಸೋಮಲಾಪುರ | 29/3ಎ, 29/3ಬಿ, 55/1, 55/7 | 2.38, 2.08, 0.14, 6.03 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು, ಕುರುಗೋಡು ಇವರ ಎಂ.ಆರ್.ಸಂ.51/2008-09 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಠಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 09-10-2015, 20-05-2016 ಮತ್ತು 08-07-2016 ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಅವರ ವಕೀಲರು ಮುಖಾಂತರ ದಿನಾಂಕ: 08/07/2016 ರಂದು ಈ ನ್ಯಾಯಾಲಯಕ್ಕೆ ಹಾಜರಾಗಿ, ಬಳ್ಳಾರಿ ತಾಲ್ಲೂಕಿನ ಸೋಮಲಾಪುರ ಗ್ರಾಮದ ಸ.ನಂ 29/3ಎ, 29/3ಬಿ, 55/1, 55/7 ವಿಸ್ತೀರ್ಣ: 2.38, 2.08, 0.14, 6.03 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಕುರುಗೋಡು ಇವರು ಮುದ್ರಾಂಕ ಶುಲ್ಕವನ್ನು ಪಾವತಿಸಿರುವುದಿಲ್ಲವೆಂದು ಎಂ ಆರ್ ನಂ 51/08-09 ದಿನಾಂಕ 25-12-2008 ರ ಗೈರು ಮಂಜೂರು ಆದೇಶದ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾಪಿತ ಜಮೀನುಗಳ ವಿವಾದಕ್ಕೆ ಸಂಬಂಧಿಸಿದಂತೆ ವಾದಿಗಳು ಮತ್ತು ವಾದಿ ಪರವಕೀಲರು ವಿವಾದಾಸ್ಪದ ಪ್ರಕರಣದ ವಿಚಾರಣೆ ದಿನಾಂಕ 08-07-2016 ರಂದು ವಿಚಾರಣೆಗೆ ಹಾಜರಾಗಿರುತ್ತಾರೆ. ಸದರಿ ಪ್ರಕರಣವನ್ನು ಪರಿಶೀಲಿಸಲಾಗಿ ಕಂದಾಯ ನಿರೀಕ್ಷಕರು ಕುರುಗೋಡು ಇವರು ಪಾಲುವಿಭಾಗದಂತೆ ಹಕ್ಕು ಬದಲಾವಣೆ ಕೋರಿದ ಪ್ರಸ್ತಾವನೆಯನ್ನು ಮುದ್ರಾಂಕ ಶುಲ್ಕ ಪಾವತಿಸಿರುವುದಿಲ್ಲವೆಂದು ಗೈರು ಮಂಜೂರು ಮಾಡಿ ಹಕ್ಕು ಬದಲಾವಣೆಯನ್ನು ತಿರಸ್ಕರಿಸಿರುವುದು ಕಂಡು ಬಂದಿರುತ್ತದೆ. ಕಾರಣ ವಿವಾದಸ್ಪದ ಜಮೀನಿನ ಹಕ್ಕು ಬದಲಾವಣೆ ಮಾಡುವ ಈ ಕೆಳಕಂಡ ಆದೇಶ.